215 (125) : ಶ್ರೀ ಅಶೋಕ್.ಆರ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಳೆದ 20 ವರ್ಷಗಳಲ್ಲಿ ಎಷ್ಟು ಖಾಸಗಿ ಕೋ-ಆಪರೇಟಿವ್ ಸೊಸೈಟಿಗಳಿಗೆ ಬಡಾವಣೆ ನಿರ್ಮಾಣ ಮಾಡಲು ನಕ್ಷೆ ಮಂಜೂರಾತಿ ಮಾಡಿದೆ; (ವಿವರಗಳನ್ನು ನೀಡುವುದು)

ಆ) ಈ ಸೊಸೈಟಿಗಳಲ್ಲಿ ಬರುವ ಎಷ್ಟು ಸಿ.ಎ. ಜಾಗವನ್ನು ಬಿ.ಡಿ.ಎ. ವತಿಯಿಂದ ಮಾರಾಟ ಮಾಡಲಾಗಿದೆ; ಇದರಿಂದ ಬಂದ ಹಣವೆಷ್ಟು;

ಇ) ಈ ಸೊಸೈಟಿಗಳಲ್ಲಿ ಅಕ್ರಮವಾಗಿ ಸಿ.ಎ. ಪಾರ್ಕ್ ಜಾಗಗಳನ್ನು ಮಾರಾಟ ಮಾಡಿರತಕ್ಕಂತಹ ಸೊಸೈಟಿಗಳಾವುವು; ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ 20 ವರ್ಷಗಳಿಂದ ಒಟ್ಟು 184 ಖಾಸಗಿ ಬಡಾವಣೆ ನಕ್ಷೆಗಳನ್ನು ಅನುಮೋದಿಸಿದೆ (ಪಟ್ಟಿ ಲಗತ್ತಿಸಿದೆ).

ಆ) ಪ್ರಾಧಿಕಾರವು ಖಾಸಗಿ ಬಡಾವಣೆಯಲ್ಲಿ ಒಟ್ಟು 157 ನಾಗರೀಕ ಸೌಲಭ್ಯ ನಿವೇಶನಗಳನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಿಯಮಾವಳಿಗಳ ಪ್ರಕಾರ ಮಾಡಲಾಗಿದೆ. ಹಂಚಿಕೆ ನಿಯಮಾವಳಿಗಳ ಪ್ರಕಾರ ಯಾವುದೇ ನಿವೇಶನಗಳನ್ನು ಮಾರಾಟ ಮಾಡುವುದಿಲ್ಲ. ಈ ಹಂಚಿಕೆಯಾಗಿರುವ ನಿವೇಶನಗಳಿಂದ ಒಟ್ಟು ಗುತ್ತಿಗೆ ಮೌಲ್ಯ ರೂ. 15,08,51,964-00 ಪ್ರಾಧಿಕಾರಕ್ಕೆ ಸಂದಾಯವಾಗಿರುತ್ತದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಗಮನದಲ್ಲಿರುವಂತೆ ಅನಧಿಕೃತವಾಗಿ ಸಿ.ಎ. ಮತ್ತು ಉದ್ಯಾನವನ ನಿವೇಶನಗಳನ್ನು ಮಾರಾಟ ಮಾಡಿರುವ ಸಹಕಾರ ಸಂಘಗಳೆಂದರೆ:

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘ (ಡಿ ಗ್ರೂಪ್)
ಆ) ಅಮರಜ್ಯೋತಿ ಗೃಹ ನಿರ್ಮಾಣ ಸಂಘ, ದೊಮ್ಮಲೂರು.
ಇ) ಎನ್.ಜಿ.ಇ.ಎಫ್. ಗೃಹ ನಿರ್ಮಾಣ ಸಂಘ, ಬೆನ್ನಿಗಾನಹಳ್ಳಿ.
ಈ) ಶ್ರೀ ವಿನಾಯಕ ಗೃಹ ನಿರ್ಮಾಣ ಸಂಘ, ನಾಗರಭಾವಿ.
ಉ) ಶ್ರೀ ಬಾಪೂಜಿ ಗೃಹ ನಿರ್ಮಾಣ ಸಂಘ, ಕೆ.ಸಿ. ಅಗ್ರಹಾರ
ಊ) ವೈಯಾಲಿಕಾವಲ್ ಗೃಹ ನಿರ್ಮಾಣ ಸಂಘ, ಕೆ.ಪಿ. ಅಗ್ರಹಾರ
ಋ) ಭವಾನಿ ಗೃಹ ನಿರ್ಮಾಣ ಸಂಘ, ಕತ್ರಿಗುಪ್ಪೆ.

216 (125) : ಶ್ರೀ ಅಶೋಕ್.ಆರ್ (ಉತ್ತರಹಳ್ಳಿ), ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮತ್ತು ಶ್ರೀ ಜಿ.ಪಿ. ಮೋಹನ್, ಎಂ.ಎಲ್.ಎ (ಚಿಕ್ಕಪೇಟೆ) ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಒಡೆತನದಲ್ಲಿರುವ ನಗರದ ಚಿತ್ರಮಂದಿರಗಳು ಎಷ್ಟು ಹಾಗು ಅವು ಯಾವುವು;